ಎಚ್.ಎಸ್. ಶಿವಪ್ರಕಾಶರನ್ನು ಹೊರತುಪಡಿಸಿದರೆ ಬೇರೆ ಯಾರು ಹೊರಜಗತ್ತಿಗೆ ಪರಿಚಯವಿದ್ದಾರೆ? ಶಿವರಾಮ ಕಾರಂತ, ಬೇಂದ್ರೆ, ಕುವೆಂಪು, ಶಂಬಾ ಜೋಶಿ ಅವರ ವೈಚಾರಿಕ ಬರಹಗಳು, ಮಾಸ್ತಿ, ನಿರಂಜನ, ಅಡಿಗ, ಲಂಕೇಶ್, ತೇಜಸ್ವಿ ಇವರ್‍ಯಾರೂ ಕರ್ನಾಟಕದ ಹೊರಗಿನ ಜಗತ್ತಿಗೆ ಪರಿಚಯವೇ ಇಲ್ಲ. ಕಾರಣ, ಕನ್ನಡದ ಕೃತಿಗಳು ಇತರ ಭಾಷೆಗಳಿಗೆ ಹೋಗುತ್ತಿಲ್ಲ.

ಪುರುಷೋತ್ತಮ ಬಿಳಿಮಲೆ ಅವರು ನವದೆಹಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿದ್ದಾಗ 'ಕವಿರಾಜಮಾರ್ಗ', 'ರನ್ನನ ಗದಾಯುದ್ಧ', 'ವಡ್ಡಾರಾಧನೆ', 'ಅಮೀರಬಾಯಿ ಕರ್ನಾಟಕಿ', 'ಅಳಿದ ಮೇಲೆ' ಕೃತಿಗಳನ್ನು ಇಂಗ್ಲಿಷಿಗೆ ಅನುವಾದಿಸಿ ಕನ್ನಡೇತರರಿಗೆ ತಲುಪುವಂತೆ ಮಾಡಿದ ಕೆಲಸಗಳು ಇನ್ನಷ್ಟು ನಡೆಯಬೇಕು. ಕೇಂದ್ರೀಯ ವಿವಿಯು ಆಂಗ್ಲಭಾಷೆಯಲ್ಲಿ ಪ್ರಕಟಿಸಿದ ಛಂದಸ್ಸಿನ ಕುರಿತಾದ ಎರಡು ಪುಸ್ತಕಗಳೂ ಗಮನಾರ್ಹ.

**3**

ಇಂಗ್ಲಿಷ್ ಹೊರತಾಗಿ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸಲು ಆಯಾ ಭಾಷೆಯ ಜ್ಞಾನ, ಕಲಿಯುವ, ತಿಳಿಯುವ ಜಿಜ್ಞಾಸೆ ಇರಬೇಕಾದುದು ಅತ್ಯಾವಶ್ಯಕವಿದೆ. ಎಷ್ಟೋ ಭಾಷಾಪ್ರೇಮಿಗಳು ಆಯಾ ಪ್ರಾದೇಶಿಕ ಭಾಷೆಯನ್ನು ಕಲಿತು ಅನಂತರ ಅನುವಾದದಲ್ಲಿ ತೊಡಗಿಸಿಕೊಂಡವರಿದ್ದಾರೆ. ಬಂಗಾಲಿ ಭಾಷೆಯನ್ನು ಕಲಿತು ಗುರು ರವೀಂದ್ರರ 'ಗೀತಾಂಜಲಿ'ಯನ್ನು ನೇರ ಬಂಗಾಳಿಯಿಂದ ತರ್ಜುಮೆ ಮಾಡಿದ ಪ್ರಹ್ಲಾದ ನರೇಗಲ್ ಮಾಸ್ತರರಂಥವರು, ಅಹೋಬಲ ಶಂಕರರಂಥ ಜಿಜ್ಞಾಸುಗಳು ಬಹಳ ಜನ ಇರಬಹುದು. 'ಹಾಡ್ತಾ ಹಾಡ್ತಾ ರಾಗ' ಎನ್ನುವಂತೆ ನಿತ್ಯವೂ ಕಿವಿಗೆ ಬೀಳುವ ಭಾಷೆಯೊಂದಿಗೆ ಸ್ನೇಹ ಬೆಳೆಸುತ್ತ ಮತ್ತು ಆ ಭಾಷೆಯ ಕಲಾತ್ಮಕ ಸಿನಿಮಾಗಳನ್ನು ನೋಡುತ್ತಲೇ ನಾನು ಮರಾಠಿ, ಮಲಯಾಳಂ, ಪಂಜಾಬಿ, ಬಂಗಾಳಿ ಭಾಷೆ ಹಾಗೂ ಆ ಸಂಸ್ಕೃತಿಗಳನ್ನು ಅರಿಯಲು ಯತ್ನಿಸಿದ್ದೇನೆ. ಉತ್ತಮ ಅನುವಾದ ಕನ್ನಡಕ್ಕೆ ಬರುವಂತಾಗಲು ಭಾಷಾಂತರವನ್ನು ಗಂಭೀರವಾಗಿ ಕೈಗೊಳ್ಳುತ್ತಿರುವ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಪ್ರಾಧಿಕಾರಗಳು ಉತ್ತಮ ಅನುವಾದಕರನ್ನು ತಯಾರುಗೊಳಿಸುವತ್ತ ಶ್ರಮಿಸಬೇಕು. ಯುವಜನರು ಆಸಕ್ತಿವಹಿಸುವಂತಹ ಆಕರ್ಷಕ ಯೋಜನೆಗಳನ್ನು, ಅನುವಾದ ಕಮ್ಮಟಗಳನ್ನು ರೂಪಿಸಬೇಕು.

**4**

ಕನ್ನಡೇತರರಿಗೆ ಕನ್ನಡದ ಕೃತಿಗಳನ್ನು ತಲುಪಿಸುವ ಕಾರ್ಯ ತುರ್ತಾಗಿ ಆಗಬೇಕಾಗಿದೆ. ಈ ಕೆಲಸಗಳು ವೈಯಕ್ತಿಕ ಮಟ್ಟದಲ್ಲಿ ನಡೆಯುವುದಕ್ಕಿಂತ ಹೆಚ್ಚಾಗಿ ಸಾಂಸ್ಥಿಕವಾಗಿ ನಡೆಯಬೇಕು. ಅನುವಾದಕರಿಗೆ ಈಗ ದೊರೆಯುತ್ತಿರುವ ಸಂಭಾವನೆ ಬಹಳ ಕಡಿಮೆ ಅಥವಾ ಇಲ್ಲ. ಅನುವಾದಗಳು ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳ ಮೂಲಕ ಪ್ರಕಟವಾಗಬೇಕು. ಅವು ಕನ್ನಡೇತರರನ್ನು ಆಕರ್ಷಿಸುವಂತಾಗಬೇಕು.

**5**

ಅನುವಾದಿತ ಸೃಜನಶೀಲ ಮತ್ತು ವೈಚಾರಿಕ ಕೃತಿಗಳಿಗೆ ಕನ್ನಡದಲ್ಲಿ ದೊಡ್ಡ ಬೇಡಿಕೆಯಿದೆ. ಗಾಂಧಿ, ಅಂಬೇಡ್ಕರ್, ಲೋಹಿಯಾರಿಂದ ಹಿಡಿದು ರಾಮಚಂದ್ರ ಗುಹಾ, ಅರುಂಧತಿ ರಾಯ್, ರೊಮಿಲ ಥಾಪರ್ ಅವರ ವೈಚಾರಿಕ, ಐತಿಹಾಸಿಕ ಕೃತಿಗಳು, ಆಫ್ರಿಕನ್ ಸಾಹಿತ್ಯ, ಟಾಲ್‌ಸ್ಟಾಯ್, ದಾಸ್ತೋವ್‌ಸ್ಕಿ, ಕಾಫ್ಕಾ, ಕಮೂ, ಪಾಬ್ಲೋ ನೆರೂಡ, ಪ್ರೇಮಚಂದ್, ಮಹಾಶ್ವೇತಾದೇವಿ, ಮಾಂಟೊ, ಇಸ್ಮತ್ ಚುಗ್ತಾಯಿ, ಖುಷ್ವಂತ್ ಸಿಂಗ್, ಕಮಲಾದಾಸ್, ಅಮೃತಾ ಪ್ರೀತಮ್ ಕೃತಿಗಳಿಗೆ ಬಹುದೊಡ್ಡ ಓದುವ ವರ್ಗವಿದೆ.